ಉ) ಬರದಿದ್ದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ನಿಜವಾಗಿ ಈ ನಿವೇಶನ ಸೇರಬೇಕಾದ ಕೂಲಿ ಕಾರ್ಮಿಕನಿಗೆ ಈ ನಿವೇಶನವನ್ನು ಮಂಜೂರು ಮಾಡಲಾಗುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು. ಮೀನುಗಾರಿಕೆವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ೧೦ ಎಕರೆ ೨೧ ಗುಂಟೆ ಸುಮಾರು ೮೮೬ ಕುಟುಂಬಗಳು.

(ಆ) ಇಲ್ಲ ಉದ್ಭವಿಸುವುದಿಲ್ಲ.

(ಇ) ಪ್ರಶ್ನೆ "ಆ''ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

(ಈ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ದಿನಾಂಕ ೪-೪-೯೦ರ ಪತ್ರದಲ್ಲಿ ಶ್ರೀ ರಂಗಪ್ಪನವರ ಮಗನಾದ ಶ್ರೀ ಗೋವಿಂದಯ್ಯನವರ ನಂ. ೨೮೮ರ ಗುಡಿಸಿಲಿನ ಮಾಲೀಕರೆಂದು ಸ್ಪಷ್ಟಪಡಿಸಿದ್ದಾರೆ. ಈ ವಿಚಾರದಲ್ಲಿ ಕೆಳಹಂತದಲ್ಲಿ ಅವ್ಯವಹಾರ ನಡೆದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

(ಉ) ಶ್ರೀ ರಂಗಪ್ಪನವರ ಮಗನಾದ ಶ್ರೀ ತಿಮ್ಮಯ್ಯ ಎಂಬುವವರು ನಾನು ಸಂ. ೨೮೮ರ ಗುಡಿಸಲುವಾಸಿಯೆಂದು ಕ್ಲೇಮ್ ಮಾಡಿರುವ ಆಧಾರದ ಮೇಲೆ ಅಧಿಕೃತ ನಿವಾಸಿಯಾರೆಂಬುದರ ವಿಚಾರಣೆ ನಡೆಸಲಾಗುತ್ತಿದೆ.

ಮೊಳ್ಳಾಲ್‌ಮೂರು ಕ್ಷೇತ್ರದಲ್ಲಿನ ಜನತಾ ಮನೆಗಳ ಪರಿಸ್ಥಿತಿ ಬಗ್ಗೆ

೪೭೮ (೧೪೯೩) ಶ್ರೀ ಎನ್. ಜಿ. ನಾಯ್ಕ್ (ಮೊಳ್ಳಾಲ್‌ಮೂರು).—ಮಾನ್ಯ ಬಂದರು. ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಮೊಳ್ಳಾಲ್‌ಮೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನತಾ ಮನೆಗಳನ್ನು ನಿರ್ಮಿಸಲಾಗಿದೆಯೇ ? (ವರ್ಷವಾರು. ಗ್ರಾಮವಾರು ಮಾಹಿತಿಯನ್ನು ನೀಡುವುದು) ?

ಆ) ಈ ಮನೆಗಳು ವಾಸಮಾಡಲು ಸೂಕ್ತವಾಗಿಯೇ ?

ಇ) ಹಾಗಿಲ್ಲದಿದ್ದಲ್ಲಿ, ಆದಕ್ಕೆ ಕಾರಣಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ, ಮತ್ತು ನಗರಾಭಿವೃದ್ಧಿ ಸಚಿವರು).—

(ಅ)

ವರ್ಷ	ಮನೆಗಳ ಸಂಖ್ಯೆ
೧೯೮೭–೮೮	೨೨
೧೯೮೮–೮೯	೧೩
೧೯೮೯–೯೦	೪
ಒಟ್ಟು	೩೯

(ವರ್ಷವಾರು, ಗ್ರಾಮವಾರು ಮಾಹಿತಿಯನ್ನು ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಲಾಗಿದೆ)

(ಆ) –ಹೌದು–

(ಇ) –ಉದ್ಭವಿಸುವುದಿಲ್ಲ–

ಅನುಬಂಧ :

ಕ್ರಮ ಸಂಖ್ಯೆ	ವರ್ಷ	ಗ್ರಾಮದ ಹೆಸರು	ಪೂರ್ಣಗೊಂಡ ಮನೆಗಳ ಸಂಖ್ಯೆ	ಒಟ್ಟು
೧.	೧೯೮೭–೮೮	೧. ನೇರ್ಲಹಳ್ಳಿ	೧	
		೨. ರೇಪು	೨	
		೩. ಕುಕಾರಲ ಹಟ್ಟಿ	೧	
		೪. ಜೆ. ಬಿ. ಹಳ್ಳಿ	೨	
		೫. ಶಿಲೇಕಳ	೧	
		೬. ಕೋನಸಾಗರ	೧	
		೭. ಕೊಂಡ್ಲಹಳ್ಳಿ	೧	
		೮. ಬಿ. ಜೆ. ಕೆರೆ	೨	
		೯. ದೇವಸಮುದ್ರ	೧	
		೧೦. ಯರ್ರೆನಹಳ್ಳಿ	೧	
		೧೧. ಪಕರ್ತಿ	೧	
		೧೨. ಕಾವಲಕುಂಟೆ	೧	
		೧೩. ತಳವಾರಹಳ್ಳಿ	೧	
		೧೪. ತಮ್ಮೇನಹಳ್ಳಿ	೧	
		೧೫. ರಾಂಪುರ	೩	
		೧೬. ಮುತ್ತಿಗಾರಹಳ್ಳಿ	೨	೨೨
೨.	೧೯೮೮–೮೯	೧. ರಾಂಪುರ	೩	
		೨. ಮೇಗಲಹಳ್ಳಿ	೧	
		೩. ಮಾರಮ್ಮನಹಳ್ಳಿ	೧	
		೪. ನಾಗಸಮುದ್ರ	೨	
		೫. ಬಿ. ಜೆ. ಕೆರೆ	೧	
		೬. ಸೋಲೇನಹಳ್ಳಿ	೨	
		೭. ಗುಡ್ಡದಹಳ್ಳಿ	೧	
		೮. ನೇರ್ಲಹಳ್ಳಿ	೧	
		೯. ಕೊಂಡ್ಲಹಳ್ಳಿ	೧	೧೩
೩.	೧೯೮೯–೯೦	೧. ಶಿರೇಕೊಳ	೧	
		೨. ಶಿವ್ಮೊಲಾಪುರ	೧	
		೩. ಕೋನಸಾಗರ	೧	
		೪. ಕಾವಲಕುಂಟೆ	೧	೪
		ಒಟ್ಟು	೩೯	೩೯